Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


भाग IX  अनुभाग 1
PART IX  SECTION 1
ಭಾಗ IX  ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, दिसम्बर 22, 1986 | पुष्य 1, 1908 (शक) | खण्ड–6 |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |


## MINISTRY OF LAW AND JUSTICE

(Legislative Department)

New Delhi, October 30, 1986

The translations in Kannada of the following namely—(1) The All Idia Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಸರ್ಕಾರಿ ರಹಸ್ಯಗಳ ಅಧಿನಿಯಮ, 1923

## (1923ರ ಅಧಿನಿಯಮ ಸಂಖ್ಯೆ 19)

[2ನೇ ಏಪ್ರಿಲ್, 1923.]

ಸರ್ಕಾರಿ ರಹಸ್ಯಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಸರ್ಕಾರಿ ರಹಸ್ಯಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಇದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ.**– (1) ಈ ಅಧಿನಿಯಮವನ್ನು ಸರ್ಕಾರಿ ರಹಸ್ಯಗಳ ಅಧಿನಿಯಮ, 1923 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಸರ್ಕಾರಿ ನೌಕರರಿಗೆ ಮತ್ತು ಭಾರತದ ನಾಗರಿಕರಿಗೂ ಸಹ ಅನ್ವಯವಾಗುತ್ತದೆ.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(1) ಸರ್ಕಾರಕ್ಕೆ ಸೇರಿರುವ ಯಾವುದೇ ಸ್ಥಳದ ಉಲ್ಲೇಖವು, ಆ ಸ್ಥಳವು ಸರ್ಕಾರದಲ್ಲಿ ವಾಸ್ತವವಾಗಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ, ಸರ್ಕಾರದ ಯಾವುದೇ ಇಲಾಖೆಯ ಅಧಿಭೋಗದಲ್ಲಿರುವ ಸ್ಥಳವನ್ನು ಒಳಗೊಳ್ಳುತ್ತದೆ;

(2) ತಿಳಿಸುವುದು ಅಥವಾ ಸ್ವೀಕರಿಸುವುದು ಎಂಬುದನ್ನು ಕುರಿತ ಪದಗಳು, ಯಾವುದೇ ಬಗೆಯನ್ನು ತಿಳಿಸುವುದನ್ನು ಮತ್ತು ಸ್ವೀಕರಿಸುವುದನ್ನು ಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯೇ ಆಗಲಿ ಮತ್ತು ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು ಅಥವಾ ಸ್ವಯಂ ಮಾಹಿತಿಗಳಷ್ಟನ್ನೂ ಅಥವಾ ಅವುಗಳ ಸಾರಾಂಶ, ಪರಿಣಾಮ ಅಥವಾ ವಿವರಣೆಗಳನ್ನು ಮಾತ್ರವೇ ತಿಳಿಸುವುದಾಗಲೀ ಅಥವಾ ಸ್ವೀಕರಿಸುವುದಾಗಲೀ ಒಳಗೊಳ್ಳುತ್ತವೆ. ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜುಗಳನ್ನು ಪಡೆಯುವುದು ಅಥವಾ ಇಟ್ಟುಕೊಳ್ಳುವುದು ಎಂಬುದನ್ನು ಉಲ್ಲೇಖಿಸುವ ಪದಾವಳಿಗಳು ಕಚ್ಚಾ ನಕಾಶೆ, ನಕ್ಷೆ,

ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜನ್ನು ಪೂರ್ಣವಾಗಿಯಾಗಲೀ ಅಥವಾ ಭಾಗಶಃವಾಗಿಯಾಗಲೀ ಪ್ರತಿ ಮಾಡುವುದನ್ನು ಅಥವಾ ಪ್ರತಿ ಮಾಡಿಸುವುದನ್ನು ಒಳಗೊಳ್ಳುತ್ತವೆ ಮತ್ತು ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ ಪ್ರತಿ ಮಾಡಿಸುವುದನ್ನು ಒಳಗೊಳ್ಳುತ್ತವೆ ಮತ್ತು ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜಿನ ವರ್ಗಾವಣೆ ಅಥವಾ ರವಾನೆಯನ್ನು ಒಳಗೊಳ್ಳುತ್ತವೆ;

(3) "ದಸ್ತಾವೇಜು" ಎಂಬುದು ದಸ್ತಾವೇಜಿನ ಭಾಗವನ್ನು ಒಳಗೊಳ್ಳುತ್ತದೆ;

(4) "ಮಾದರಿ" ಎಂಬುದು ವಿನ್ಯಾಸ, ರೂಪ ಮತ್ತು ನಮೂನೆಯನ್ನು ಒಳಗೊಳ್ಳುತ್ತದೆ;

(5) "ಯುದ್ಧ ಸಾಮಗ್ರಿ" ಎಂಬುದು ಯುದ್ಧದಲ್ಲಿ ಪೂರ್ತಿಯಾಗಲೀ, ಭಾಗಶಃವಾಗಲೀ ಬಳಸಲು ಉದ್ದೇಶಿಸಲಾದ ಅಥವಾ ಅಳವಡಿಸಲಾದ ಯಾವುದೇ ಹಡಗು, ಜಲಾಂತರ್ಗಾಮಿ ನೌಕೆ, ವಿಮಾನ, ಟ್ಯಾಂಕು ಅಥವಾ ಅದೇ ತರಹದ ಎಂಜಿನು, ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡು, ಟಾರ್ಪೆಡೊ ಅಥವಾ ನೆಲಬಾಂಬು ಮತ್ತು ವಾಸ್ತವವಾಗಿ ಅಥವಾ ಪ್ರಸ್ತಾವಿತವಾಗಿ ಅಂಥ ಬಳಕೆಗಾಗಿ ಉದ್ದೇಶಿಸಲಾದ ಇತರ ಯಾವುದೇ ವಸ್ತು ಸಾಮಗ್ರಿ ಅಥವಾ ಸಾಧನವನ್ನು ಒಳಗೊಳ್ಳುತ್ತದೆ;

(6) "ಸರ್ಕಾರದ ಅಧೀನದ ಹುದ್ದೆ" ಎಂಬುದು ಸರ್ಕಾರದ ಯಾವುದೇ ಇಲಾಖೆಯಲ್ಲಿನ ಅಥವಾ ಅದರ ಅಡಿಯಲ್ಲಿನ ಯಾವುದೇ ಹುದ್ದೆ ಅಥವಾ ನಿಯೋಜನೆಯನ್ನು ಒಳಗೊಳ್ಳುತ್ತದೆ;

(7) "ಛಾಯಾಚಿತ್ರ" ಎಂಬುದು ಸಂಸ್ಕರಿಸಿರುವ ಫಿಲಂ ಅಥವಾ ಛಾಯಾಚಿತ್ರ ಫಲಕವನ್ನು ಒಳಗೊಳ್ಳುತ್ತದೆ;

(8) "ನಿಷೇಧಿತ ಸ್ಥಳ" ಎಂದರೆ:-

(ಎ) ಸರ್ಕಾರಕ್ಕೆ ಸೇರಿದ ಅಥವಾ ಅದರ ಪರವಾಗಿ ಅಧಿಭೋಗದಲ್ಲಿರುವ ಯಾವುದೇ ರಕ್ಷಣಾ ಕಾಮಗಾರಿ, ಆಯುಧಶಾಲೆ, ನೌಕಾ ವಿಷಯಿಕ, ಸೈನಿಕ ಅಥವಾ ವಾಯುಸೇನಾ ಸ್ಥಾಪನೆ ಅಥವಾ ನೆಲ, ನೆಲ ಬಾಂಬು, ನೆಲಬಾಂಬು ಪ್ರದೇಶ, ಶಿಬಿರ, ಹಡಗು ಅಥವಾ ವಿಮಾನ, ಸೇನಾ ಟೆಲಿಗ್ರಾಫ್ ಅಥವಾ ದೂರವಾಣಿ, ಹಾಗೆ ಸೇರಿದ ಅಥವಾ ಅಧಿಭೋಗದಲ್ಲಿರುವ ಯಾವುದೇ ನಿಸ್ತಂತು (ವೈರ್‌ಲೆಸ್) ಅಥವಾ ಸಂಕೇತ ಠಾಣೆ ಅಥವಾ ಕಚೇರಿ ಮತ್ತು ಯಾವುದೇ ಯುದ್ಧಸಾಮಗ್ರಿಗಳ ಅಥವಾ ಅವುಗಳಿಗೆ ಸಂಬಂಧಿಸಿದ ಯಾವುದೇ ಕಚ್ಚಾ ನಕಾಶೆಗಳು, ಸ್ಥಾವರಗಳು, ಮಾದರಿಗಳು ಅಥವಾ ದಸ್ತಾವೇಜುಗಳ ನಿರ್ಮಾಣ, ದುರಸ್ತಿ, ತಯಾರಿಕೆ ಅಥವಾ ದಾಸ್ತಾನು ಮಾಡಿರುವ ಉದ್ದೇಶಕ್ಕಾಗಿ ಅಥವಾ

ಯುದ್ಧಕಾಲದಲ್ಲಿ ಬಳಸುವುದಕ್ಕಾಗಿ ಯಾವುದೇ ಲೋಹಗಳು, ತೈಲ ಅಥವಾ ಖನಿಜಗಳನ್ನು ಪಡೆಯುವ ಉದ್ದೇಶಕ್ಕಾಗಿ ಬಳಸಲಾಗುವ ಮತ್ತು ಸರ್ಕಾರಕ್ಕೆ ಸೇರಿದ ಅಥವಾ ಅಧಿಭೋಗದಲ್ಲಿರುವ ಯಾವುದೇ ಕಾರ್ಖಾನೆ, ನೌಕಾಂಗಣ ಅಥವಾ ಇತರ ಸ್ಥಳ;

(ಬಿ) ಯಾವುದೇ ಯುದ್ಧ ಸಾಮಗ್ರಿಗಳನ್ನು ಅಥವಾ ಅದಕ್ಕೆ ಸಂಬಂಧಿಸಿದ ಕಚ್ಚಾ ನಕಾಶೆಗಳು, ಮಾದರಿಗಳು, ನಕ್ಷೆಗಳು ಅಥವಾ ದಸ್ತಾವೇಜುಗಳನ್ನು ತಯಾರಿಸುತ್ತಿರುವ, ದುರಸ್ತಿ ಮಾಡುತ್ತಿರುವ, ಪಡೆದುಕೊಳ್ಳುವ ಅಥವಾ ಸರ್ಕಾರದೊಡನೆ ಅಥವಾ ಅವರ ಪರವಾಗಿ ಯಾರೇ ವ್ಯಕ್ತಿಯೊಡನೆ ಅಥವಾ ಅನ್ಯಥಾ ದಾಸ್ತಾನು ಮಾಡಲಾಗುತ್ತಿರುವ ಸರ್ಕಾರಕ್ಕೆ ಸೇರಿರದ ಯಾವುದೇ ಸ್ಥಳ;

(ಸಿ) ಯಾವುದೇ ಸ್ಥಳಕ್ಕೆ ಸಂಬಂಧಿಸಿದ ಮಾಹಿತಿಯು ಅಥವಾ ಅದಕ್ಕೆ ಸಂಬಂಧಿಸಿದ ಹಾನಿಯು ಶತ್ರುವಿಗೆ ಉಪಯೋಗವಾಗುವುದೆಂಬ ಆಧಾರದ ಮೇಲೆ ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಷೇಧಿತ ಸ್ಥಳವೆಂದು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತತ್ಕಾಲದಲ್ಲಿ ಘೋಷಿಸಿದ ಮತ್ತು ಅದರ ಬಗ್ಗೆ ಅಧಿಸೂಚನೆಯ ಪ್ರತಿಯನ್ನು ಇಂಗ್ಲೀಷಿನಲ್ಲಿ ಮತ್ತು ಸ್ಥಳೀಯ ಭಾಷೆಯಲ್ಲಿ ಅಂಟಿಸಲಾಗಿದ್ದು, ಸರ್ಕಾರಕ್ಕೆ ಸೇರಿದ ಅಥವಾ ಅದರ ಉದ್ದೇಶಕ್ಕಾಗಿ ಉಪಯೋಗಿಸಲಾದ ಯಾವುದೇ ಸ್ಥಳ;

(ಡಿ) ಯಾವುದೇ ರೈಲುದಾರಿ, ರಸ್ತೆ, ದಾರಿ ಅಥವಾ ನಾಲೆ (ಅದರ ಭಾಗವಾಗಿರುವ ಅಥವಾ ಆದರೊಂದಿಗೆ ಸೇರಿಕೊಂಡಿರುವ ಯಾವುದೇ ಕಾಮಗಾರಿಗಳು ಅಥವಾ ರಚನೆಗಳನ್ನು ಒಳಗೊಂಡು) ಅಥವಾ ಭೂಮಿ ಅಥವಾ ನೀರಿನ ಮೂಲಕ ಇತರ ಯಾವುವೇ ಸಂಪರ್ಕ ಸಾಧನಗಳು ಅಥವಾ ಅನಿಲ, ಜಲ ಅಥವಾ ವಿದ್ಯುಚ್ಛಕ್ತಿಯ ಕಾಮಗಾರಿಗಳಿಗಾಗಿ ಅಥವಾ ಸಾರ್ವಜನಿಕ ಸ್ವರೂಪದ ಉದ್ದೇಶಗಳಿಗಾಗಿರುವ ಇತರ ಕಾಮಗಾರಿಗಳಿಗಾಗಿ ಉಪಯೋಗಿಸಲಾದ ಯಾವುದೇ ಸ್ಥಳ ಅಥವಾ ಯಾವುದೇ ಯುದ್ಧಸಾಮಗ್ರಿಗಳ ಅಥವಾ ಯಾವುದೇ ಕಚ್ಚಾ ನಕಾಶೆಗಳ, ಮಾದರಿಗಳ, ನಕ್ಷೆಗಳ ಅಥವಾ ಅವುಗಳಿಗೆ ಸಂಬಂಧಿಸಿದ ದಸ್ತಾವೇಜುಗಳ ತಯಾರಿಕೆ, ದುರಸ್ತಿ ಅಥವಾ ದಾಸ್ತಾನನ್ನು ಅನ್ಯಥಾ ಸರ್ಕಾರದ ಪರವಾಗಿ ಮಾಡುತ್ತಿರುವ ಯಾವುದೇ ಸ್ಥಳಕ್ಕೆ ಸಂಬಂಧಿಸಿದ ಮಾಹಿತಿಯು ಅಥವಾ ಅದರ ಹಾನಿ ಅಥವಾ ಅಡಚಣೆಯು ಅಥವಾ ಅದರೊಂದಿಗೆ ಹಸ್ತಕ್ಷೇಪ ಮಾಡುವುದು ಶತ್ರುವಿಗೆ ಉಪಯೋಗವಾಗುವುದೆಂಬ ಕಾರಣದ ಮೇಲೆ ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಷೇಧಿತ ಸ್ಥಳವೆಂದು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ

ಮೂಲಕ ತತ್ಕಾಲದಲ್ಲಿ ಘೋಷಿಸಿದ ಮತ್ತು ಅದರ ಬಗ್ಗೆ ಅಧಿಸೂಚನೆಯ ಪ್ರತಿಯನ್ನು ಇಂಗ್ಲೀಷಿನಲ್ಲಿ ಮತ್ತು ಸ್ಥಳೀಯ ದೇಶಭಾಷೆಯಲ್ಲಿ ಅಂಟಿಸಲಾಗಿರುವ ಯಾವುದೇ ಸ್ಥಳ;

(9) "ಕಚ್ಚಾ ನಕಾಶೆ" ಎಂಬುದು ಯಾವುದೇ ಸ್ಥಳ ಅಥವಾ ವಸ್ತುವನ್ನು ನಿರೂಪಿಸುವ ಯಾವುದೇ ಛಾಯಾಚಿತ್ರ ಅಥವಾ ಇತರ ವಿಧಾನವನ್ನು ಒಳಗೊಳ್ಳುತ್ತದೆ; ಮತ್ತು

(10) "ಪೊಲೀಸು ಅಧೀಕ್ಷಕ" ಎಂಬುದು ಅದೇ ದರ್ಜೆ ಅಥವಾ ವರಿಷ್ಠ ದರ್ಜೆಯ ಯಾರೇ ಪೊಲೀಸು ಅಧಿಕಾರಿಯನ್ನು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದಿಂದ ಯಾವ ವ್ಯಕ್ತಿಗೆ ಪೊಲೀಸು ಅಧೀಕ್ಷಕನ ಅಧಿಕಾರಗಳು ಪ್ರದತ್ತವಾಗಿದೆಯೋ ಆ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**3. ಗೂಢಚರ್ಯೆಗಾಗಿ ದಂಡನೆಗಳು.**– (1) ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾಗುವ ಯಾವುದೇ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯು,–

(ಎ) ಯಾವುದೇ ನಿಷೇಧಿತ ಸ್ಥಳವನ್ನು ಸಮೀಪಿಸಿದರೆ, ಪರಿಶೀಲಿಸಿದರೆ, ಹಾದುಹೋದರೆ ಅಥವಾ ಅದರ ಆಸುಪಾಸಿನಲ್ಲಿದ್ದರೆ ಅಥವಾ ಅದನ್ನು ಪ್ರವೇಶಿಸಿದರೆ; ಅಥವಾ

(ಬಿ) ಶತ್ರುವಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಪಯೋಗವಾಗುವುದೆಂದು ಲೆಕ್ಕ ಹಾಕಿ ಅಥವಾ ಉಪಯೋಗವಾಗಬಹುದಾದ ಅಥವಾ ಉಪಯೋಗವಾಗಲೆಂಬ ಉದ್ದೇಶದಿಂದ ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ ಅಥವಾ ಟಿಪ್ಪಣಿಯನ್ನು ತಯಾರಿಸಿದರೆ; ಅಥವಾ

(ಸಿ) ಶತ್ರುವಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಪಯೋಗವಾಗುವುದೆಂದು ಲೆಕ್ಕಹಾಕಿ ಅಥವಾ ಉಪಯೋಗವಾಗಬಹುದಾದ ಅಥವಾ ಉಪಯೋಗವಾಗಲೆಂಬ ಉದ್ದೇಶವಿರುವ ಅಥವಾ ಅದನ್ನು ಬಹಿರಂಗಪಡಿಸುವುದರಿಂದ ಭಾರತದ ಸಾರ್ವಭೌಮತ್ವ ಮತ್ತು ಅಖಂಡತ್ವವನ್ನು, ರಾಷ್ಟ್ರದ ಸುರಕ್ಷೆ ಅಥವಾ ವಿದೇಶಿ ರಾಜ್ಯಗಳೊಡನೆ ಸ್ನೇಹಪರ ಸಂಬಂಧಗಳನ್ನು ಬಾಧಿಸುವ ಸಂಭವವಿರುವ ಯಾವುದೇ ರಹಸ್ಯ, ಸರ್ಕಾರಿ ಸಂಕೇತ ಅಥವಾ ಗೌಪ್ಯ ಸಂಕೇತ ಪದ, ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ ಅಥವಾ ಟಿಪ್ಪಣಿ ಅಥವಾ ಇತರ ದಸ್ತಾವೇಜು ಅಥವಾ ಮಾಹಿತಿಯನ್ನು ಪಡೆದರೆ, ಸಂಗ್ರಹಿಸಿದರೆ, ಅಭಿಲೇಖಿಸಿದರೆ ಅಥವಾ ಪ್ರಕಟಿಸಿದರೆ ಅಥವಾ ಇತರೆ ಯಾರೇ ವ್ಯಕ್ತಿಗೆ ತಿಳಿಸಿದರೆ

– ಅವನು ರಕ್ಷಣಾ ಕಾಮಗಾರಿಯ, ಆಯುಧಶಾಲೆಯ, ನೌಕಾ, ಸೈನಿಕ ಅಥವಾ ವಾಯುಸೇನಾ ಸ್ಥಾಪನೆಯ ಅಥವಾ ನೆಲೆ, ನೆಲಬಾಂಬು, ನೆಲಬಾಂಬು ಕ್ಷೇತ್ರದ, ಕಾರ್ಖಾನೆಯ, ನೌಕಾಂಗಣದ, ಶಿಬಿರದ,

ಹಡಗಿನ ಅಥವಾ ವಿಮಾನದ ಸಂಬಂಧದಲ್ಲಿ ಅಥವಾ ಅನ್ಯಥಾ ಸರ್ಕಾರದ ನೌಕಾ, ಸೈನಿಕ ಅಥವಾ ವಾಯುಸೇನಾ ವ್ಯವಹಾರಗಳ ಸಂಬಂಧದಲ್ಲಿ ಅಥವಾ ಯಾವುದೇ ರಹಸ್ಯ ಸರ್ಕಾರಿ ಸಂಕೇತದ ಸಂಬಂಧದಲ್ಲಿ ಅಪರಾಧ ಮಾಡಿರುವಲ್ಲಿ ಹದಿನಾಲ್ಕು ವರ್ಷಗಳವರೆಗೆ ಮತ್ತು ಇತರ ಸಂದರ್ಭಗಳಲ್ಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

(2) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಪ್ರಾಸಿಕ್ಯೂಷನಿನಲ್ಲಿ ಆಪಾದಿತ ವ್ಯಕ್ತಿಯು ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾಗುವ ಉದ್ದೇಶವನ್ನು ತೋರಿಸುವ ಪ್ರವೃತ್ತಿಯುಳ್ಳ ಯಾವುದೇ ನಿರ್ದಿಷ್ಟ ಕೃತ್ಯವನ್ನು ಅವನ ವಿರುದ್ಧವಾಗಿ ರುಜುವಾತುಪಡಿಸದಿದ್ದಾಗ್ಯೂ, ಪ್ರಕರಣದ ಸಂದರ್ಭಗಳಿಂದ ಅಥವಾ ಅವನ ನಡತೆಯಿಂದ ಅಥವಾ ರುಜುವಾತಾದಂತೆ ಗೊತ್ತಾದ ಅವನ ಚಾರಿತ್ರ್ಯದಿಂದ ಅವನ ಉದ್ದೇಶವು ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾದ ಉದ್ದೇಶವಾಗಿತ್ತೆಂದು ಕಂಡುಬಂದರೆ ಅವನನ್ನು ಅಪರಾಧಿಯೆಂದು ನಿರ್ಣಯಿಸಬಹುದು ಮತ್ತು ಯಾವುದೇ ನಿಷೇಧಿತ ಸ್ಥಳಕ್ಕೆ ಸಂಬಂಧಿಸಿದ ಅಥವಾ ಅದರಲ್ಲಿ ಉಪಯೋಗಿಸಿದ ಅಥವಾ ಅಂಥ ಸ್ಥಳದಲ್ಲಿರುವ ಯಾವುದೇ ವಸ್ತುವಿಗೆ ಸಂಬಂಧಿಸಿ, ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು ಅಥವಾ ಮಾಹಿತಿಯು ಅಥವಾ ಯಾವುದೇ ರಹಸ್ಯ ಸರ್ಕಾರಿ ಸಂಕೇತ ಪದವನ್ನು ಕಾನೂನುಬದ್ಧ ಅಧಿಕಾರದ ಮೇರೆಗೆ ಕೆಲಸ ಮಾಡುತ್ತಿರುವ ವ್ಯಕ್ತಿಯಲ್ಲದ ಇತರ ಯಾರೇ ವ್ಯಕ್ತಿಯು ತಯಾರಿಸಿದರೆ, ಪಡೆದುಕೊಂಡರೆ, ಸಂಗ್ರಹಿಸಿದರೆ, ದಾಖಲಿಸಿದರೆ, ಪ್ರಕಟಿಸಿದರೆ, ತಿಳಿಸಿದರೆ ಮತ್ತು ಪ್ರಕರಣದ ಸಂದರ್ಭಗಳಿಂದ ಅಥವಾ ಅವನ ನಡತೆಯಿಂದ ಅಥವಾ ರುಜುವಾತಾದಂತೆ ಗೊತ್ತಾದ ಅವನ ಚಾರಿತ್ರ್ಯದಿಂದ ಅವನ ಉದ್ದೇಶವು ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾದ ಉದ್ದೇಶವಾಗಿತ್ತೆಂದು ಕಂಡುಬಂದರೆ, ಅಂಥ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು, ಮಾಹಿತಿ, ಸಂಕೇತ ಅಥವ ಸಂಕೇತ ಪದವನ್ನು ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾಗುವ ಉದ್ದೇಶಕ್ಕಾಗಿ ತಯಾರಿಸಲಾಗಿದೆ, ಪಡೆಯಲಾಗಿದೆ, ಸಂಗ್ರಹಿಸಲಾಗಿದೆ, ಅಭಿಲೇಖಿಸಲಾಗಿದೆ, ಪ್ರಕಟಿಸಲಾಗಿದೆ ಅಥವಾ ತಿಳಿಸಲಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು.

**4. ವಿದೇಶಿ ಏಜೆಂಟರೊಡನೆ ಸಂಪರ್ಕಗಳು ಕೆಲವು ಅಪರಾಧಗಳನ್ನು ಮಾಡಿರುವುದರ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.–** (1) ಪ್ರಕರಣ 3ರ ಮೇರೆಗಿನ ಅಪರಾಧಕ್ಕಾಗಿ ವ್ಯಕ್ತಿಯ ವಿರುದ್ಧ ಯಾವುದೇ ವ್ಯವಹರಣೆಗಳಲ್ಲಿ ಭಾರತದ ಒಳಗಾಗಲೀ ಅಥವಾ ಹೊರಗಾಗಲೀ, ವಿದೇಶಿ ಏಜೆಂಟನೊಡನೆ ಸಂಪರ್ಕವನ್ನು ಹೊಂದಿದ್ದಾನೆ ಅಥವಾ ಸಂಪರ್ಕವನ್ನು ಹೊಂದಲು ಪ್ರಯತ್ನಿಸಿದ್ದಾನೆಂಬ ಸಂಗತಿಯು ಅವನು ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾಗುವ ಉದ್ದೇಶವಾಗಿರಬಹುದಾದ ಅಥವಾ

ಉಪಯೋಗವಾಗಲೆಂಬ ಉದ್ದೇಶವಿರುವ ಮಾಹಿತಿಯನ್ನು ಪಡೆದಿದ್ದಾನೆ ಅಥವಾ ಪಡೆಯಲು ಪ್ರಯತ್ನಿಸಿದ್ದಾನೆ ಎಂದು ರುಜುವಾತುಗೊಳಿಸುವ ಉದ್ದೇಶಕ್ಕಾಗಿ ಸುಸಂಗತವಾಗಿರತಕ್ಕದ್ದು.

(2) ಈ ಪ್ರಕರಣದ ಉದ್ದೇಶಕ್ಕಾಗಿ, ಆದರೆ ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ,–

(ಎ) ಒಬ್ಬ ವ್ಯಕ್ತಿಯು,–

(i) ಅವನು, ಭಾರತದ ಒಳಗಾಗಲಿ ಅಥವಾ ಹೊರಗಾಗಲಿ, ವಿದೇಶಿ ಏಜೆಂಟನ ವಿಳಾಸ ಸ್ಥಳಕ್ಕೆ ಭೇಟಿಕೊಟ್ಟಿದ್ದರೆ ಅಥವಾ ವಿದೇಶಿ ಏಜೆಂಟನ ಸಹಚರನಾಗಿದ್ದರೆ ಅಥವಾ ಸಹವರ್ತಿಯಾಗಿದ್ದರೆ; ಅಥವಾ

(ii) ಭಾರತದ ಒಳಗಾಗಲಿ ಅಥವಾ ಹೊರಗಾಗಲಿ, ವಿದೇಶಿ ಏಜೆಂಟನ ಹೆಸರು ಅಥವಾ ವಿಳಾಸ ಅಥವಾ ಸಂಬಂಧಪಟ್ಟ ಇತರ ಯಾವುದೇ ಮಾಹಿತಿ ಅವನ ಸ್ವಾಧೀನದಲ್ಲಿರುವುದು ಕಂಡುಬಂದರೆ ಅಥವಾ ಅದನ್ನು ಇತರ ಯಾರೇ ವ್ಯಕ್ತಿಯಿಂದ ತಾನು ಪಡೆದುಕೊಂಡಿದ್ದರೆ, ವಿದೇಶಿ ಏಜೆಂಟನೊಡನೆ ಸಂಪರ್ಕ ಹೊಂದಿದ್ದಾನೆಂದು ಪೂರ್ವಭಾವನೆ ಮಾಡಬಹುದು.

(ಬಿ) "ವಿದೇಶಿ ಏಜೆಂಟ್" ಎಂಬ ಪದಗಳು ರಾಷ್ಟ್ರದ ಸುರಕ್ಷೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾಗುವ ಕೃತ್ಯವನ್ನು ಭಾರತದ ಒಳಗೆ ಅಥವಾ ಹೊರಗೆ ಮಾಡುವ ಉದ್ದೇಶಕ್ಕಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿದೇಶಿ ಸರ್ಕಾರದಿಂದ ನಿಯೋಜಿತನಾದ ಅಥವಾ ನಿಯೋಜಿತನಾಗಿರುವ ಅಥವಾ ಯಾರಿಗೆ ಸಂಬಂಧಿಸಿದಂತೆ ನಿಯೋಜಿತನಾಗಿರುವನೆಂದು ಅಥವಾ ನಿಯೋಜಿತನಾಗಿದ್ದನೆಂದು ಸಂಶಯಪಡಲು ಯುಕ್ತ ಕಾರಣಗಳಿವೆಯೆಂದು ಕಂಡುಬರುವುದೋ ಆ ಯಾರೇ ವ್ಯಕ್ತಿಯನ್ನು ಅಥವಾ ವಿದೇಶಿ ಸರ್ಕಾರದ ಹಿತಾಸಕ್ತಿಗಳಿಗಾಗಿ ಅಂಥ ಕೃತ್ಯವನ್ನು ಭಾರತದ ಒಳಗಾಗಲಿ ಅಥವಾ ಹೊರಗಾಗಲಿ ಮಾಡಿರುವನೆಂದು ಅಥವಾ ಮಾಡಲು ಪ್ರಯತ್ನಿಸಿದ್ದಾನೆಂದು ಯುಕ್ತವಾಗಿ ಸಂಶಯಪಡಲಾದ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(ಸಿ) ವಿದೇಶಿ ಏಜೆಂಟನಿಗಾಗಿ ಉದ್ದೇಶಿತ ಸಮಾಚಾರಗಳನ್ನು ಸ್ವೀಕರಿಸಲು ಉಪಯೋಗಿಸಲಾಗಿದೆಯೆಂದು ಸಂಶಯಪಡಲು ಯುಕ್ತ ಕಾರಣಗಳಿದೆ ಎಂದು ಕಂಡುಬರುವ ಭಾರತದ ಒಳಗಿನ ಅಥವಾ ಹೊರಗಿನ ಯಾವುದೇ ವಿಳಾಸ ಅಥವಾ ವಿದೇಶಿ ಏಜೆಂಟನು ವಾಸಿಸುವ ವಿಳಾಸ ಅಥವಾ ಅವನು ಸಮಾಚಾರಗಳನ್ನು ಕೊಡುವ ಅಥವಾ ಸ್ವೀಕರಿಸುವ

ಉದ್ದೇಶಕ್ಕಾಗಿ ಹೋಗಿಬರುತ್ತಿರುವ ಅಥವಾ ಅವನು ಯಾವುದೇ ವ್ಯವಹಾರವನ್ನು ನಡೆಸುತ್ತಿರುವ ಯಾವುದೇ ವಿಳಾಸವನ್ನು ವಿದೇಶಿ ಏಜೆಂಟನ ವಿಳಾಸವೆಂದು ಮತ್ತು ಅಂಥ ವಿಳಾಸಕ್ಕೆ ಕಳುಹಿಸಿದ ಸಮಾಚಾರಗಳು ವಿದೇಶಿ ಏಜೆಂಟನೊಂದಿಗಿನ ಸಂಪರ್ಕಗಳೆಂದು ಪೂರ್ವಭಾವನೆ ಮಾಡಬಹುದು.

**5. ಅಕ್ರಮವಾಗಿ ಮಾಹಿತಿಯನ್ನು ತಿಳಿಸುವುದು, ಇತ್ಯಾದಿ.–** ನಿಷೇಧಿತ ಸ್ಥಳಕ್ಕೆ ಸಂಬಂಧಿಸಿದ ಅಥವಾ ಅದರಲ್ಲಿ ಉಪಯೋಗಿಸಿದ ಅಥವಾ ಅಂಥ ಸ್ಥಳದಲ್ಲಿರುವ ಯಾವುದೇ ವಸ್ತುವಿಗೆ ಸಂಬಂಧಿಸುವ ಅಥವಾ ಶತ್ರುವಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಾಯ ಮಾಡುವ ಸಂಭವವಿರುವ ಅಥವಾ ಯಾವ ವಿಷಯವನ್ನು ಬಹಿರಂಗಪಡಿಸುವುದರಿಂದ ಭಾರತದ ಸಾರ್ವಭೌಮತ್ವ ಮತ್ತು ಅಖಂಡತ್ವವನ್ನು, ರಾಷ್ಟ್ರದ ಸುರಕ್ಷೆ ಅಥವಾ ವಿದೇಶಿ ರಾಜ್ಯಗಳೊಡನೆ ಸ್ನೇಹಪರ ಸಂಬಂಧಗಳನ್ನು ಬಾಧಿಸುವ ಸಂಭವವಿದೆಯೋ ಆ ವಿಷಯಕ್ಕೆ ಸಂಬಂಧಿಸಿದ ಅಥವಾ ಈ ಅಧಿನಿಯಮವನ್ನು ಉಲ್ಲಂಘಿಸಿ ತಯಾರಿಸಿದ ಅಥವಾ ಪಡೆದುಕೊಂಡ ಅಥವಾ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು ವಿಶ್ವಾಸದಿಂದ ಅವನಿಗೆ ವಹಿಸಿದ ಅಥವಾ ಅವನು ಪಡೆದುಕೊಂಡ ಅಥವಾ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿರುವ ಅಥವಾ ಮಾಡಿದ ವ್ಯಕ್ತಿಯೆಂಬ ಸ್ಥಾನಬಲದಿಂದ ಪ್ರವೇಶಾವಕಾಶವನ್ನು ಪಡೆದುಕೊಂಡಿರುವ ಅಥವಾ ಅದನ್ನು ಹೊಂದಿದ್ದ ಅಥವಾ ಸರ್ಕಾರದ ಪರವಾಗಿ ಮಾಡಿಕೊಂಡಿರುವ ಕರಾರನ್ನು ಹೊಂದಿರುವ ಅಥವಾ ಹೊಂದಿದ್ದ ವ್ಯಕ್ತಿಯ ಅಧೀನದಲ್ಲಿ ನಿಯೋಜಿತನಾಗಿರುವ ಅಥವಾ ನಿಯೋಜಿತನಾಗಿದ್ದ ವ್ಯಕ್ತಿಯಾಗಿ ತನ್ನ ಸ್ವಾಧೀನತೆಯಲ್ಲಿ ಅಥವಾ ನಿಯಂತ್ರಣದಲ್ಲಿ ಯಾವುದೇ ರಹಸ್ಯ, ಸರ್ಕಾರಿ ಸಂಕೇತ, ಸಂಕೇತ ಪದ ಯಾವುದೇ ಕಚ್ಚಾ ನಕಾಶೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು ಅಥವಾ ಮಾಹಿತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು,–

(ಎ) ಯಾವ ವ್ಯಕ್ತಿಗೆ ಅದನ್ನು ತಿಳಿಸಲು ಅವನು ಅಧಿಕೃತನಾಗಿದ್ದಾನೆಯೋ ಆ ವ್ಯಕ್ತಿಯನ್ನು ಅಥವಾ ರಾಷ್ಟ್ರದ ಹಿತಾಸಕ್ತಿಯಲ್ಲಿ ಯಾವ ನ್ಯಾಯಾಲಯಕ್ಕೆ ಅಥವಾ ವ್ಯಕ್ತಿಗೆ ಅದನ್ನು ತಿಳಿಸುವುದು ಅವನ ಕರ್ತವ್ಯವಾಗಿದೆಯೋ ಆ ನ್ಯಾಯಾಲಯ ಅಥವಾ ಆ ವ್ಯಕ್ತಿಯನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಗೆ ಸಂಕೇತ, ಸಂಕೇತ ಪದ, ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು ಅಥವಾ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ತಿಳಿಸಿದರೆ; ಅಥವಾ

(ಬಿ) ಯಾವುದೇ ವಿದೇಶಿ ಸರ್ಕಾರದ ಪ್ರಯೋಜನಕ್ಕಾಗಿ ಅಥವಾ ರಾಷ್ಟ್ರದ ಸಂರಕ್ಷೆಗೆ ಬಾಧಕವಾಗುವ ಯಾವುದೇ ಇತರ ರೀತಿಯಲ್ಲಿ ತನ್ನ ಸ್ವಾಧೀನದಲ್ಲಿರುವ ಮಾಹಿತಿಯನ್ನು ಉಪಯೋಗಿಸಿದರೆ; ಅಥವಾ

(ಸಿ) ತನ್ನ ಸ್ವಾಧೀನ ಅಥವಾ ನಿಯಂತ್ರಣದಲ್ಲಿರುವ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ ಅಥವಾ ದಸ್ತಾವೇಜನ್ನು ಅವನು ಉಳಿಸಿಕೊಳ್ಳಲು ಅವನಿಗೆ ಯಾವುದೇ ಹಕ್ಕು ಇಲ್ಲದಿರುವಾಗ ಅಥವಾ ಅದನ್ನು ಉಳಿಸಿಕೊಳ್ಳುವುದು ಅವನ ಕರ್ತವ್ಯಕ್ಕೆ ವಿರುದ್ಧವಾಗಿರುವಾಗ ಅದನ್ನು ಉಳಿಸಿಕೊಂಡರೆ ಅಥವಾ ವಾಪಾಸಾತಿ ಅಥವಾ ವಿಲೆಗೆ ಸಂಬಂಧಿಸಿ ಕಾನೂನುಬದ್ಧ ಪ್ರಾಧಿಕಾರಿಯು ನೀಡಿದ ಎಲ್ಲಾ ನಿರ್ದೇಶನಗಳನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ; ಅಥವಾ

(ಡಿ) ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು, ರಹಸ್ಯ ಸರ್ಕಾರಿ ಸಂಕೇತ ಅಥವಾ ಸಂಕೇತ ಪದ ಅಥವಾ ಯಾವುದೇ ಅಥವಾ ಮಾಹಿತಿಯ ಬಗ್ಗೆ ಯುಕ್ತ ಎಚ್ಚರಿಕೆ ವಹಿಸಲು ತಪ್ಪಿದರೆ ಅಥವಾ ಅವುಗಳ ಸುರಕ್ಷತೆಗೆ ಅಪಾಯವುಂಟಾಗುವ ಹಾಗೆ ನಡೆದುಕೊಂಡರೆ

– ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಯಾರೇ ವ್ಯಕ್ತಿಯು ಯಾವುದೇ ರಹಸ್ಯ ಸರ್ಕಾರಿ ಸಂಕೇತ ಅಥವಾ ಸಂಕೇತ ಪದ ಅಥವಾ ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು ಅಥವಾ ಮಾಹಿತಿಯನ್ನು ಅವನು ಅದನ್ನು ಸ್ವೀಕರಿಸುವ ಕಾಲದಲ್ಲಿ ಸಂಕೇತ ಅಥವಾ ಸಂಕೇತ ಪದ, ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು ಟಿಪ್ಪಣಿ, ದಸ್ತಾವೇಜು ಅಥವಾ ಮಾಹಿತಿಯನ್ನು ಈ ಅಧಿನಿಯಮವನ್ನು ಉಲ್ಲಂಘಿಸಿ ಕಳುಹಿಸಲಾಗಿದೆಯೆಂದು ಗೊತ್ತಿದ್ದು ಅಥವಾ ನಂಬಲು ಯುಕ್ತ ಕಾರಣವಿದ್ದು ಸ್ವಇಚ್ಛೆಯಿಂದ ಸ್ವೀಕರಿಸಿದರೆ ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(3) ಯುದ್ಧ ಸಾಮಗ್ರಿಗಳಿಗೆ ಸಂಬಂಧಿಸಿದ ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ, ದಸ್ತಾವೇಜು ಅಥವಾ ಮಾಹಿತಿಯನ್ನು ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಯಾರೇ ವ್ಯಕ್ತಿಯು ಯಾವುದೇ ವಿದೇಶಿ ಸರ್ಕಾರಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅದನ್ನು ಯಾವುದೇ ವಿದೇಶಿ ಶಕ್ತಿಗೆ ಅಥವಾ ರಾಷ್ಟ್ರದ ಸುರಕ್ಷತೆಗೆ ಅಥವಾ ಹಿತಾಸಕ್ತಿಗೆ ಬಾಧಕವಾಗುವ ಯಾವುದೇ ಇತರ ರೀತಿಯಲ್ಲಿ ಅದನ್ನು ತಿಳಿಸಿದರೆ, ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(4) ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾದ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**6. ಸಮವಸ್ತ್ರಗಳ ಅನಧಿಕೃತ ಬಳಕೆ, ವರದಿಗಳನ್ನು ಸುಳ್ಳಾಗಿ ಮಾಡುವುದು, ಸುಳ್ಳು ಸ್ಪಷ್ಟನೆ, ರೂಪಧಾರಣೆ ಮತ್ತು ಸುಳ್ಳು ದಸ್ತಾವೇಜುಗಳು.–** (1) ನಿಷೇಧಿತ ಸ್ಥಳಕ್ಕೆ ಪ್ರವೇಶ ಪಡೆಯುವ ಅಥವಾ ಯಾರೇ ಇತರ ವ್ಯಕ್ತಿಗೆ ಪ್ರವೇಶ ಪಡೆಯಲು ಸಹಾಯ ಮಾಡುವ ಉದ್ದೇಶಕ್ಕಾಗಿ ಅಥವಾ ರಾಷ್ಟ್ರದ ಸುರಕ್ಷೆಗೆ ಬಾಧಕವಾಗುವ ಇತರ ಯಾವುದೇ ಉದ್ದೇಶಕ್ಕಾಗಿ,–

(ಎ) ಯಾವುದೇ ನೌಕಾ, ಸೈನಿಕ, ವಾಯುಸೇನಾ, ಪೊಲೀಸು ಅಥವಾ ಇತರ ಸರ್ಕಾರಿ ಸಮವಸ್ತ್ರಗಳನ್ನು ಅಥವಾ ಮೋಸ ಮಾಡುವ ಉದ್ದೇಶವಿರುವಷ್ಟರ ಮಟ್ಟಿಗೆ ಅದಕ್ಕೆ ನಿಕಟ ಹೋಲಿಕೆ ಇರುವ, ಯಾವುದೇ ಸಮವಸ್ತ್ರವನ್ನು ಕಾನೂನುಬದ್ಧ ಅಧಿಕಾರವಿಲ್ಲದೆ ಬಳಸಿದರೆ ಅಥವಾ ಧರಿಸಿದರೆ ಅಥವಾ ಅಂಥ ಯಾವುದೇ ಸಮವಸ್ತ್ರವನ್ನು ತಾನು ಬಳಸಲು ಅಥವಾ ಧರಿಸಲು ಹಕ್ಕನ್ನು ಹೊಂದಿರುವಂಥ ಅಥವಾ ಹೊಂದಿದ್ದಂಥ ವ್ಯಕ್ತಿಯು ತಾನೇ ಎಂದು ಸುಳ್ಳು ನಿರೂಪಣೆ ಮಾಡಿದರೆ; ಅಥವಾ

(ಬಿ) ಯಾವುದೇ ಘೋಷಣೆ ಅಥವಾ ಅರ್ಜಿಯಲ್ಲಿ, ಬಾಯಿಮಾತಿನಲ್ಲಿ ಅಥವಾ ಬರಹದಲ್ಲಿ ಅಥವಾ ತಾನು ಅಥವಾ ತನ್ನ ಪರವಾಗಿ ಸಹಿ ಮಾಡಿದ ಯಾವುದೇ ದಸ್ತಾವೇಜಿನಲ್ಲಿ, ತಿಳಿದೂ ತಿಳಿದೂ ಯಾವುದೇ ಸುಳ್ಳು ಹೇಳಿಕೆಯನ್ನು ಅಥವಾ ಲೋಪವನ್ನು ಮಾಡಿದರೆ ಅಥವಾ ಮಾಡಲು ಪರೋಕ್ಷ ಸಮ್ಮತಿ ನೀಡಿದರೆ; ಅಥವಾ

(ಸಿ) ಯಾವುದೇ ಪಾಸ್‌ಪೋರ್ಟ್ ಅಥವಾ ಯಾವುದೇ ನೌಕಾ, ಸೈನಿಕ, ವಾಯುಸೇನಾ, ಪೊಲೀಸು ಅಥವಾ ಇತರ ಸರ್ಕಾರಿ ಪಾಸು, ಅನುಮತಿ, ಪ್ರಮಾಣಪತ್ರ, ಲೈಸೆನ್ಸ್ ಅಥವಾ ಅದೇ ರೀತಿಯ ಇತರ ದಸ್ತಾವೇಜನ್ನು (ಇದರಲ್ಲಿ ಇನ್ನೂ ಮುಂದೆ ಈ ಪ್ರಕರಣದಲ್ಲಿ ಸರ್ಕಾರಿ ದಸ್ತಾವೇಜು ಎಂದು ಉಲ್ಲೇಖಿಸಲಾಗಿದೆ) ಸೃಷ್ಟಿ ಮಾಡಿದರೆ, ವ್ಯತ್ಯಾಸ ಮಾಡಿದರೆ ಅಥವಾ ಅಕ್ರಮವಾಗಿ ತಿದ್ದಿದ್ದರೆ ಅಥವಾ ಯಾವುದೇ ಅಂಥ ಸೃಷ್ಟಿಸಿದ, ವ್ಯತ್ಯಾಸಗೊಳಿಸಿದ ಅಥವಾ ಅಕ್ರಮ ಸರ್ಕಾರಿ ದಸ್ತಾವೇಜನ್ನು ತಿಳಿದೂ ತಿಳಿದೂ ಉಪಯೋಗಿಸಿದರೆ ಅಥವಾ ತನ್ನ ಸ್ವಾಧೀನದಲ್ಲಿಟ್ಟುಕೊಂಡರೆ; ಅಥವಾ

(ಡಿ) ಸರ್ಕಾರದ ಅಧೀನದಲ್ಲಿ ಪದವನ್ನು ಧಾರಣ ಮಾಡಿರುವ ವ್ಯಕ್ತಿ ಎಂಬಂತೆ ಅಥವಾ ಸರ್ಕಾರದ ಅಧೀನದಲ್ಲಿರುವ ಪದವನ್ನು ಧಾರಣ ಮಾಡಿರುವ ವ್ಯಕ್ತಿಯು ನಿಯೋಜನೆಯಲ್ಲಿರುವ ವ್ಯಕ್ತಿಯೆಂಬಂತೆ ಅಥವಾ ಸರ್ಕಾರಿ ದಸ್ತಾವೇಜು ಅಥವಾ ರಹಸ್ಯ ಸರ್ಕಾರಿ ಸಂಕೇತ ಅಥವಾ ಸಂಕೇತ ಪದವನ್ನು ಕ್ರಮವಾಗಿ ನೀಡಲಾಗಿದೆ ಅಥವಾ ತಿಳಿಸಲಾಗಿದೆ ಎಂಬಂತೆ ಪರರೂಪದ ಧಾರಣ ಮಾಡಿದರೆ ಅಥವಾ ಸುಳ್ಳು ನಿರೂಪಣೆ ಮಾಡಿದರೆ ಅಥವಾ ತನಗಾಗಿಯಾಗಲೀ ಅಥವಾ ಇತರ ಯಾರೇ ವ್ಯಕ್ತಿಗಾಗಿಯಾಗಲೀ, ಸರ್ಕಾರಿ ದಸ್ತಾವೇಜು, ರಹಸ್ಯ ಸರ್ಕಾರಿ ಸಂಕೇತ ಅಥವಾ

ಸಂಕೇತ ಪದವನ್ನು ಪಡೆಯುವ ಉದ್ದೇಶಕ್ಕಾಗಿ ತಿಳಿದೂ ತಿಳಿದೂ ಯಾವುದೇ ಸುಳ್ಳು ಹೇಳಿಕೆಯನ್ನು ಮಾಡಿದರೆ; ಅಥವಾ

(ಇ) ಸರ್ಕಾರದ ಯಾವುದೇ ಇಲಾಖೆಯ ಅಥವಾ ಅದಕ್ಕೆ ಸೇರಿದ ಅಥವಾ ಅದರಿಂದ ಅಥವಾ ಅದರ ಮೂಲಕ ಸರ್ಕಾರದ ಅಧಿಕಾರದ ಮೇರೆಗೆ ನೇಮಕಗೊಂಡ ಅಥವಾ ಅದರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ರಾಜತಾಂತ್ರಿಕ, ಸೈನಿಕ ಅಥವಾ ವಾಯುಸೇನಾ ಪ್ರಾಧಿಕಾರದಿಂದ ಉಪಯೋಗಿಸುವ, ಮಾಡಿದ ಅಥವಾ ಒದಗಿಸಿದ ಯಾವುದೇ ಅಚ್ಚು, ಮೊಹರು ಅಥವಾ ಮುದ್ರೆಯನ್ನು ಅಥವಾ ಯಾವುದೇ ಅಂಥ ಅಚ್ಚು, ಮೊಹರು ಅಥವಾ ಮುದ್ರೆಯನ್ನು ಮೋಸ ಮಾಡಲು ಲೆಕ್ಕ ಹಾಕಿದಷ್ಟು ಮಟ್ಟಿಗೆ ಅದಕ್ಕೆ ನಿಕಟ ಹೋಲಿಕೆ ಇರುವ ಯಾವುದೇ ಅಂಥ ಅಚ್ಚು, ಮೊಹರು ಅಥವಾ ಮುದ್ರೆಯನ್ನು ಸರ್ಕಾರದ ಇಲಾಖೆಯ ಅಥವಾ ಸಂಬಂಧಪಟ್ಟ ಪ್ರಾಧಿಕಾರಿಯ ಅಧಿಕಾರವಿಲ್ಲದೆ ಉಪಯೋಗಿಸಿದರೆ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರೆ ಅಥವಾ ಅಂಥ ಯಾವುದೇ ಅಚ್ಚು, ಮೊಹರು ಅಥವಾ ಮುದ್ರೆಯನ್ನು ಸರ್ಕಾರದ ಇಲಾಖೆಯ ಅಥವಾ ಸಂಬಂಧಪಟ್ಟ ಪ್ರಾಧಿಕಾರಿಯ ಅಧಿಕಾರವಿಲ್ಲದೆ ಉಪಯೋಗಿಸಿದರೆ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರೆ ಅಥವಾ ಅಂಥ ಯಾವುದೇ ಅಚ್ಚು, ಮೊಹರು ಅಥವಾ ಮುದ್ರೆಯನ್ನು ಖೋಟಾ ಮಾಡಿದರೆ ಅಥವಾ ತಿಳಿದೂ ತಿಳಿದೂ ಅಂಥ ಯಾವುದೇ ಅಚ್ಚು, ಮೊಹರು ಅಥವಾ ಮುದ್ರೆಯನ್ನು ಉಪಯೋಗಿಸಿದರೆ ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರೆ ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಯಾರೇ ವ್ಯಕ್ತಿಯು ರಾಷ್ಟ್ರದ ಸುರಕ್ಷೆಗೆ ಬಾಧಕ ಉಂಟುಮಾಡುವ ಯಾವುದೇ ಉದ್ದೇಶಕ್ಕಾಗಿ,–

(ಎ) ಪೂರ್ಣವಾಗಿರುವ ಅಥವಾ ಆಗಿಲ್ಲದಿರುವ, ಬಳಕೆಗಾಗಿ ನೀಡಿರುವ ಅಥವಾ ನೀಡಿಲ್ಲದಿರುವ ಯಾವುದೇ ಸರ್ಕಾರಿ ದಸ್ತಾವೇಜನ್ನು ಅದನ್ನು ಉಳಿಸಿಕೊಳ್ಳಲು ಹಕ್ಕು ಇಲ್ಲದಿರುವಾಗ ಅಥವಾ ಅದನ್ನು ಉಳಿಸಿಕೊಳ್ಳುವುದು ತನ್ನ ಕರ್ತವ್ಯಕ್ಕೆ ವಿರುದ್ಧವಾಗಿರುವಾಗ ಉಳಿಸಿಕೊಂಡರೆ ಅಥವಾ ಅದನ್ನು ವಾಪಸ್ಸು ಮಾಡುವುದಕ್ಕೆ ಅಥವಾ ವಿಲೆ ಮಾಡುವುದಕ್ಕೆ ಸಂಬಂಧಿಸಿದ ಸರ್ಕಾರದ ಯಾವುದೇ ಇಲಾಖೆಯಿಂದ ಅಥವಾ ಅಂಥ ಇಲಾಖೆಯಿಂದ ಅಧಿಕೃತನಾದ ಯಾರೇ ವ್ಯಕ್ತಿಯು ನೀಡಿದ ಯಾವುದೇ ನಿರ್ದೇಶನಗಳನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ; ಅಥವಾ

(ಬಿ) ತನ್ನ ಉಪಯೋಗಕ್ಕೆ ಮಾತ್ರವೇ ನೀಡಿರುವ ಯಾವುದೇ ಸರ್ಕಾರಿ ದಸ್ತಾವೇಜನ್ನು ಯಾರೇ ಇತರ ವ್ಯಕ್ತಿಯ ಸ್ವಾಧೀನದಲ್ಲಿ ಇಟ್ಟುಕೊಂಡಿರಲು ಅವಕಾಶ ಮಾಡಿಕೊಟ್ಟರೆ ಅಥವಾ ಹಾಗೆ

ನೀಡಿರುವ ಯಾವುದೇ ರಹಸ್ಯ, ಸರ್ಕಾರಿ ಸಂಕೇತ ಅಥವಾ ಸಂಕೇತ ಪದವನ್ನು ತಿಳಿಸಿದ್ದರೆ ಅಥವಾ ತನಗಲ್ಲದೆ ಬೇರೊಬ್ಬ ವ್ಯಕ್ತಿಯ ಉಪಯೋಗಕ್ಕಾಗಿ ನೀಡಿದ ಯಾವುದೇ ಸರ್ಕಾರಿ ದಸ್ತಾವೇಜು ಅಥವಾ ರಹಸ್ಯ ಸರ್ಕಾರಿ ಸಂಕೇತ ಅಥವಾ ಸಂಕೇತ ಪದವನ್ನು ಕಾನೂನುಬದ್ಧ ಅಧಿಕಾರವಿಲ್ಲದೆ ಅಥವಾ ಕಾರಣವಿಲ್ಲದೇ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡರೆ ಅಥವಾ ಯಾವುದೇ ಸರ್ಕಾರಿ ದಸ್ತಾವೇಜು ತನಗೆ ಸಿಕ್ಕ ಕಾರಣ ಅಥವಾ ಅನ್ಯಥಾ ಅದನ್ನು ಸ್ವಾಧೀನಕ್ಕೆ ಪಡೆದುಕೊಂಡ ಮೇಲೆ ಯಾರಿಂದ ಅಥವಾ ಯಾರ ಉಪಯೋಗಕ್ಕಾಗಿ ಅದನ್ನು ನೀಡಲಾಗಿತ್ತೋ, ಆ ವ್ಯಕ್ತಿಗೆ ಅಥವಾ ಪ್ರಾಧಿಕಾರಿಗೆ ಅಥವಾ ಪೊಲೀಸು ಅಧಿಕಾರಿಗೆ ಅದನ್ನು ವಾಪಸ್ಸು ಮಾಡಲು ಉದ್ದೇಶಪೂರ್ವಕವಾಗಿ ತಪ್ಪಿದರೆ; ಅಥವಾ

(ಸಿ) ಕಾನೂನುಬದ್ಧ ಅಧಿಕಾರ ಅಥವಾ ಕಾರಣವಿಲ್ಲದೆ ಹೇಳಿದಂಥ ಯಾವುದೇ ಅಚ್ಚು, ಮೊಹರು ಅಥವಾ ಮುದ್ರೆಯನ್ನು ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ, ತನ್ನ ಸ್ವಾಧೀನದಲ್ಲಿಟ್ಟುಕೊಂಡರೆ

– ಅವನು ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗಿರುವ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(4) ಪ್ರಕರಣ 3ರ ಉಪ ಪ್ರಕರಣ (2)ರ ಉಪಬಂಧಗಳು, ಈ ಪ್ರಕರಣದ ಮೇರೆಗೆ ಸರ್ಕಾರದ ನೌಕಾ, ಸೈನಿಕ ಅಥವಾ ವಾಯುಸೇನಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ಅಪರಾಧದ ಯಾವುದೇ ಪ್ರಾಸಿಕ್ಯೂಷನಿಗೆ, ರಾಷ್ಟ್ರದ ಸುರಕ್ಷತೆಗೆ ಬಾಧಕವಾಗುವ ಉದ್ದೇಶವನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಅಥವಾ ಯಾವುದೇ ರಹಸ್ಯ ಸರ್ಕಾರಿ ಸಂಕೇತಕ್ಕೆ ಆ ಪ್ರಕರಣದ ಮೇರೆಗೆ ದಂಡನೀಯವಾಗುವ ಅಪರಾಧಗಳ ಅಭಿಯೋಜನೆಗಳಿಗೆ ರಾಷ್ಟ್ರದ ಸುರಕ್ಷತೆ ಅಥವಾ ಹಿತಾಸಕ್ತಿಗಳಿಗೆ ಬಾಧಕವಾಗುವ ಉದ್ದೇಶವನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಅವುಗಳು ಅನ್ವಯಿಸುವ ರೀತಿಯಲ್ಲಿಯೇ ಅನ್ವಯವಾಗತಕ್ಕದ್ದು.

**7. ಪೊಲೀಸು ಅಧಿಕಾರಿಗಳೊಂದಿಗೆ ಅಥವಾ ಕೇಂದ್ರದ ಸಶಸ್ತ್ರ ಬಲಗಳ ಸದಸ್ಯರೊಂದಿಗೆ ಹಸ್ತಕ್ಷೇಪ.–** (1) ಯಾವುದೇ ನಿಷೇಧಿತ ಸ್ಥಳದ ಆಸುಪಾಸಿನಲ್ಲಿ ಯಾವ ವ್ಯಕ್ತಿಯೇ ಆಗಲೀ, ಯಾರೇ ಪೊಲೀಸು ಅಧಿಕಾರಿಯನ್ನು ಅಥವಾ ನಿಷೇಧಿತ ಸ್ಥಳಕ್ಕೆ ಸಂಬಂಧಿಸಿದಂತೆ ರಕ್ಷಣೆ, ಪಹರೆ, ಗಸ್ತು ಅಥವಾ ಅಂಥದೇ ಇತರ ಕರ್ತವ್ಯದಲ್ಲಿ ನಿರತನಾಗಿರುವ ಕೇಂದ್ರ ಸರ್ಕಾರದ, ಸಶಸ್ತ್ರ ದಳದ ಯಾರೇ ಸದಸ್ಯನನ್ನು

ಅಡ್ಡಿಪಡಿಸತಕ್ಕದ್ದಲ್ಲ, ತಿಳಿದೂ ತಿಳಿದೂ ತಪ್ಪುದಾರಿಗೆಳೆಯತಕ್ಕದ್ದಲ್ಲ ಅಥವಾ ಅನ್ಯಥಾ ಆತನೊಂದಿಗೆ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಅಥವಾ ಅವನಿಗೆ ಅಡಚಣೆ ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**8. ಅಪರಾಧಗಳನ್ನು ಮಾಡಿದ ಬಗ್ಗೆ ಮಾಹಿತಿ ಕೊಡುವ ಕರ್ತವ್ಯ.–** (1) ಪೊಲೀಸು ಅಧೀಕ್ಷಕನಿಗೆ ಅಥವಾ ಪೊಲೀಸು ಕಮೀಷನರನಿಂದ ಈ ಸಂಬಂಧವಾಗಿ ಅಧಿಕಾರ ಹೊಂದಿರುವ, ಇನ್ಸ್ ಪೆಕ್ಟರ್‌ನ ದರ್ಜೆಗೆ ಕಡಿಮೆ ಇಲ್ಲದ ಇತರ ಪೊಲೀಸ್ ಅಧಿಕಾರಿಗೆ ಅಥವಾ ರಕ್ಷಣೆ, ಪಹರೆ, ಗಸ್ತು ಅಥವಾ ಅಂಥದೇ ಇತರ ಕರ್ತವ್ಯದಲ್ಲಿ ನಿರತನಾಗಿರುವ ಕೇಂದ್ರ ಸರ್ಕಾರದ ಸಶಸ್ತ್ರದಳಗಳ ಯಾರೇ ಸದಸ್ಯನಿಗೆ ಪ್ರಕರಣ 3ರ ಅಡಿಯಲ್ಲಿನ ಅಥವಾ ಪ್ರಕರಣ 9ರೊಂದಿಗೆ ಓದಿಕೊಂಡ ಪ್ರಕರಣ 3ರ ಅಡಿಯಲ್ಲಿನ ಅಪರಾಧದ ಅಥವಾ ಸಂಶಯಪಡಲಾದ ಅಪರಾಧದ ಸಂಬಂಧದಲ್ಲಿ ತನ್ನ ಅರಿವಿನಲ್ಲಿನ ಯಾವುದೇ ಮಾಹಿತಿಯನ್ನು ನೀಡುವುದು ಮತ್ತು ಹಾಗೆ ಅಗತ್ಯಪಡಿಸಿದರೆ ಮತ್ತು ಅಂಥ ಮಾಹಿತಿಯನ್ನು ಒದಗಿಸುವ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ಯುಕ್ತ ಕಾಲದಲ್ಲಿ ಮತ್ತು ಸ್ಥಳದಲ್ಲಿ ಹಾಜರಾಗುವುದಕ್ಕೆ ಅವನ ಯುಕ್ತ ವೆಚ್ಚಗಳನ್ನು ಕೊಟ್ಟ ಮೇಲೆ ಹಾಜರಾಗುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು.

(2) ಯಾರೇ ವ್ಯಕ್ತಿಯು ಅಂಥ ಯಾವುದೇ ಮಾಹಿತಿಯನ್ನು ನೀಡಲು ಅಥವಾ ಮೇಲೆ ಹೇಳಿದಂತೆ ಹಾಜರಾಗಲು ತಪ್ಪಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**9. ಪ್ರಯತ್ನಗಳು, ದುಷ್ಪ್ರೇರಣೆ ಇತ್ಯಾದಿ.–** ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಮಾಡಲು ಪ್ರಯತ್ನಿಸುವ ಅಥವಾ ಮಾಡುವಂತೆ ದುಷ್ಪ್ರೇರಿಸುವ ಯಾರೇ ವ್ಯಕ್ತಿಯು, ಅವನು ಅಂಥ ಅಪರಾಧವನ್ನು ಮಾಡಿದ್ದರೆ ಹೇಗೋ ಹಾಗೆ ಅದೇ ದಂಡನೆಯಿಂದ ದಂಡನೀಯನಾಗತಕ್ಕದ್ದು ಮತ್ತು ಅದೇ ರೀತಿಯಲ್ಲಿ ಅವನ ವಿರುದ್ಧ ಕ್ರಮಕ್ಕೆ ಗುರಿಯಾಗತಕ್ಕದ್ದು.

**10. ಗೂಢಚಾರಿಗಳಿಗೆ ಆಶ್ರಯ ಕೊಡುವುದಕ್ಕೆ ದಂಡ.–** (1) ಪ್ರಕರಣ 3ರ ಅಡಿಯಲ್ಲಿನ ಅಥವಾ ಪ್ರಕರಣ 9ರೊಂದಿಗೆ ಓದಿಕೊಂಡ ಪ್ರಕರಣ 3ರ ಅಡಿಯಲ್ಲಿನ ಅಪರಾಧವನ್ನು ಮಾಡಲಿರುವ ಅಥವಾ ಮಾಡಿರುವ ವ್ಯಕ್ತಿಯೆಂದು ತನಗೆ ಗೊತ್ತಿದ್ದ ಅಥವಾ ಊಹಿಸಲು ಯುಕ್ತಕಾರಣ ಹೊಂದಿರುವ ಯಾರೇ ವ್ಯಕ್ತಿಯು ತಿಳಿದೂ ತಿಳಿದೂ ಆ ವ್ಯಕ್ತಿಗೆ ಆಶ್ರಯಕೊಟ್ಟರೆ ಅಥವಾ ತನ್ನ ಅಧಿಭೋಗದಲ್ಲಿರುವ ಅಥವಾ ತನ್ನ ನಿಯಂತ್ರಣದಲ್ಲಿರುವ ಯಾವುದೇ ಆವರಣದಲ್ಲಿ ಅಂಥ ಯಾರೇ ವ್ಯಕ್ತಿಗಳನ್ನು ಭೇಟಿಯಾಗಲು ಅಥವಾ

ಸೇರಲು ತಿಳಿದೂ ತಿಳಿದೂ ಅನುಮತಿಸಿದರೆ ಅವನು ಈ ಪ್ರಕರಣದ ಅಡಿಯಲ್ಲಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಮೇಲೆ ಹೇಳಿದಂಥ ಯಾರೇ ವ್ಯಕ್ತಿಗೆ ಆಶ್ರಯ ಕೊಟ್ಟಿರುವ ಅಥವಾ ಮೇಲೆ ಹೇಳಿದಂಥ ಯಾರೇ ವ್ಯಕ್ತಿಗಳಿಗೆ ತನ್ನ ಅಧಿಭೋಗ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಆವರಣದಲ್ಲಿ ಭೇಟಿಯಾಗಲು ಅಥವಾ ಸೇರಲು ಅನುಮತಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಯಾವುದೇ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳಿಗೆ ಸಂಬಂಧಿಸಿದ ತನ್ನ ನಿಯಂತ್ರಣದ ಯಾವುದೇ ಮಾಹಿತಿಯನ್ನು ಪೊಲೀಸು ಸೂಪರಿಂಟೆಂಡೆಂಟ್‌ನಿಗೆ ಅಥವಾ ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ಇತರ ಪೊಲೀಸು ಅಧಿಕಾರಿಗೆ ಅವನು ಕೇಳಿದಾಗ ಕೊಡುವುದು ಕರ್ತವ್ಯವಾಗಿರತಕ್ಕದ್ದು ಮತ್ತು ಯಾರೇ ವ್ಯಕ್ತಿಯು ಅಂಥ ಯಾವುದೇ ಮಾಹಿತಿಯನ್ನು ಕೊಡಲು ತಪ್ಪಿದರೆ ಅವನು ಈ ಪ್ರಕರಣದ ಅಡಿಯಲ್ಲಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಅಪರಾಧದ ತಪ್ಪಿತಸ್ಥನಾಗಿರುವ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**11.ಶೋಧನಾ ವಾರೆಂಟುಗಳು.–** ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡುವ ಸಂಭವವಿದೆಯೆಂದು ಸಂಶಯಪಡಲು ಯುಕ್ತ ಕಾರಣವಿದೆಯೆಂದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಅಥವಾ ಉಪವಿಭಾಗದ ಮ್ಯಾಜಿಸ್ಟ್ರೇಟ್‌ನಿಗೆ ಪ್ರಮಾಣದ ಮೇಲಿನ ಮಾಹಿತಿಯಿಂದ ಮನದಟ್ಟಾದರೆ ಅವನು ವಾರಂಟಿನಲ್ಲಿ ಹೆಸರಿಸಲಾದ ಯಾವುದೇ ಆವರಣ ಅಥವಾ ಸ್ಥಳವನ್ನು ಯಾವುದೇ ಕಾಲದಲ್ಲಿ ಅವಶ್ಯವಾದರೆ ಬಲಾತ್ಕಾರವಾಗಿ ಪ್ರವೇಶಿಸಲು ಮತ್ತು ಆವರಣ ಅಥವಾ ಸ್ಥಳ ಅಥವಾ ಅಲ್ಲಿ ಕಂಡುಬಂದ ಪ್ರತಿಯೊಬ್ಬ ವ್ಯಕ್ತಿಯನ್ನು ಶೋಧಿಸಲು ಮತ್ತು ಯಾವುದೇ ಕಚ್ಚಾ ನಕಾಶೆ, ನಕ್ಷೆ, ಮಾದರಿ, ವಸ್ತು, ಟಿಪ್ಪಣಿ ಅಥವಾ ದಸ್ತಾವೇಜು ಅಥವಾ ಅಂಥದೇ ಸ್ವರೂಪದ ಯಾವುದನ್ನೇ ಆಗಲಿ ಅಥವಾ ಈ ಅಧಿನಿಯಮದ ಮೇರೆಗೆ ಮಾಡಲಾಗಿರುವ ಅಥವಾ ಮಾಡುವ ಸಂಭವವಿರುವ ಅಪರಾಧದ ಸಾಕ್ಷ್ಯವಾಗಿದ್ದು, ಅವನು ಆವರಣದಲ್ಲಿ ಅಥವಾ ಸ್ಥಳದಲ್ಲಿ ಕಾಣಬಹುದಾದ ವಸ್ತುವನ್ನು ಅಥವಾ ಅಂಥ ಯಾರೇ ವ್ಯಕ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಮತ್ತು ಯಾವುದರ ಬಗ್ಗೆ ಅಥವಾ ಯಾವುದಕ್ಕೆ ಸಂಬಂಧಿಸಿ ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡುವ ಸಂಭವವಿದೆಯೆಂದು ಸಂಶಯಪಡಲು ಯುಕ್ತ ಕಾರಣವಿದೆಯೋ ಆ ಬಗ್ಗೆ ಅಥವಾ ಅದರ ಸಂಬಂಧದಲ್ಲಿ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ

ದರ್ಜೆಗೆ ಕಡಿಮೆಯಿಲ್ಲದ ಪೊಲೀಸ್ ಅಧಿಕಾರಿ ಹೆಸರು ನಮೂದಿಸಿ ಶೋಧನಾ ವಾರೆಂಟನ್ನು ಕೊಡಬಹುದು.

(2) ಅಧೀಕ್ಷಕನ ದರ್ಜೆಗೆ ಕಡಿಮೆಯಿಲ್ಲದ ಪೊಲೀಸು ಅಧಿಕಾರಿಗೆ ಸಂದರ್ಭವು ಅತಿ ತುರ್ತಿನದ್ದಾಗಿದೆಯೆಂದು ಮತ್ತು ರಾಷ್ಟ್ರದ ಹಿತಾಸಕ್ತಿಗಳಲ್ಲಿ ತ್ವರಿತ ಕ್ರಮವು ಅವಶ್ಯವೆಂದು ಕಂಡುಬಂದರೆ, ಅವನು ಈ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟ್‌ನ ವಾರೆಂಟಿನ ಮೂಲಕ ಕೊಡಬಹುದಾದಂಥವೇ ಅಧಿಕಾರವನ್ನು ಯಾರೇ ಪೊಲೀಸು ಅಧಿಕಾರಿಗೆ ಲಿಖಿತ ಆದೇಶದ ಮೂಲಕ ತನ್ನ ಸಹಿಯೊಡನೆ ಕೊಡಬಹುದು.

(3) ಉಪ ಪ್ರಕರಣ (2)ರ ಮೇರೆಗೆ ಪೊಲೀಸು ಅಧಿಕಾರಿಯು ಕ್ರಮವನ್ನು ತೆಗೆದುಕೊಂಡಿದ್ದಲ್ಲಿ, ಅವನು ಆದಷ್ಟು ಬೇಗನೆ, ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಗೆ ಮತ್ತು ಅಂಥ ಪಟ್ಟಣದ ಹೊರಗಡೆ ಜಿಲ್ಲಾ ಅಥವಾ ಉಪ ವಿಭಾಗ ಮ್ಯಾಜಿಸ್ಟ್ರೇಟ್‌ನಿಗೆ ಅಂಥ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು.

**12. 1898ರ ಅಧಿನಿಯಮ 4ರ ಪ್ರಕರಣ 337ರ ಉಪಬಂಧಗಳು ಪ್ರಕರಣ 3, 5 ಮತ್ತು 7ರ ಅಡಿಯಲ್ಲಿನ ಅಪರಾಧಗಳಿಗೆ ಅನ್ವಯವಾಗತಕ್ಕದ್ದು.–** ದಂಡ ಪ್ರಕ್ರಿಯಾ ಸಂಹಿತೆ, 1898*ರ ಪ್ರಕರಣ 337ರ ಉಪಬಂಧಗಳು, ಪ್ರಕರಣ 3ರ ಮೇರೆಗೆ ಅಥವಾ ಪ್ರಕರಣ 5ರ ಮೇರೆಗೆ ಅಥವಾ ಪ್ರಕರಣ 7ರ ಮೇರೆಗೆ ಅಥವಾ ಪ್ರಕರಣ 9ರೊಡನೆ ಓದಿಕೊಂಡ ಸದರಿ ಪ್ರಕರಣ 3, 5 ಅಥವಾ 7ರ ಪೈಕಿ ಯಾವುದೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಬಂಧದಲ್ಲಿ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಸಂಬಂಧದಲ್ಲಿ ಅವು ಅನ್ವಯವಾಗುವಂತೆಯೇ ಅನ್ವಯವಾಗತಕ್ಕದ್ದು.

**13. ಅಪರಾಧಗಳ ಅಧಿವಿಚಾರಣೆಯ ಮೇಲೆ ನಿರ್ಬಂಧ.–** (1) ಜಿಲ್ಲಾ ಅಥವಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳದರ್ಜೆಯ (ಸೂಕ್ತ ಸರ್ಕಾರದಿಂದ ಈ ಸಂಬಂಧದಲ್ಲಿ ವಿಶೇಷವಾಗಿ ಅಧಿಕಾರ ಪಡೆದ ಮೊದಲನೇ ವರ್ಗದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಹೊರತು) ಯಾವ ನ್ಯಾಯಾಲಯವೇ ಆಗಲಿ ಈ ಅಧಿನಿಯಮದ ಅಡಿಯಲ್ಲಿನ ಯಾವ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟನ ಮುಂದೆ ಅಧಿವಿಚಾರಣೆಯಲ್ಲಿರುವ ಯಾರೇ ವ್ಯಕ್ತಿಯು ಆರೋಪವನ್ನು ರೂಪಿಸುವ ಮೊದಲು ಯಾವ ಕಾಲದಲ್ಲೇ ಆಗಲಿ ಸೆಷನ್ಸ್ ನ್ಯಾಯಾಲಯದಿಂದ ಅಧಿವಿಚಾರಣೆಯಾಗಬೇಕೆಂದು ಕ್ಲೇಮು ಮಾಡಿದಲ್ಲಿ, ಮ್ಯಾಜಿಸ್ಟ್ರೇಟನು

---

* ಈಗಿನ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರ.306 ಅನ್ನು ನೋಡಿ.

ಆಪಾದಿತನನ್ನು ವಿಮೋಚನೆಗೊಳಿಸದಿದ್ದರೆ ಅದು ಆ ನ್ಯಾಯಾಲಯದಿಂದ ಅಧಿವಿಚಾರಣೆ ನಡೆಸಬೇಕಾದ ಮೊಕದ್ದಮೆಯಾಗಿಲ್ಲದಿದ್ದಾಗ್ಯೂ, ಸೆಷನ್ಸ್ ನ್ಯಾಯಾಲಯದಿಂದ ಅಧಿವಿಚಾರಣೆಯಾಗಲು ಒಪ್ಪಿಸತಕ್ಕದ್ದು.

(3) ಸಮುಚಿತ ಸರ್ಕಾರದ ಅಥವಾ ಈ ಸಂಬಂಧದಲ್ಲಿ ಸಮುಚಿತ ಸರ್ಕಾರದಿಂದ ಅಧಿಕಾರ ಪಡೆದ ಯಾವೊಬ್ಬ ಅಧಿಕಾರಿಯ ಆದೇಶದಿಂದ ಅಥವಾ ಅಧಿಕಾರದ ಅಡಿಯಲ್ಲಿ ಫಿರ್ಯಾದು ಮಾಡಿದ್ದ ಹೊರತು, ಯಾವ ನ್ಯಾಯಾಲಯವೇ ಆಗಲಿ ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(4) ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ವ್ಯಕ್ತಿಯ ಅಧಿವಿಚಾರಣೆ ಮಾಡುವ ಉದ್ದೇಶಗಳಿಗಾಗಿ ಅಪರಾಧವು ಯಾವ ಸ್ಥಳದಲ್ಲಿ ವಾಸ್ತವವಾಗಿ ನಡೆಯಿತೋ ಆ ಸ್ಥಳದಲ್ಲಿ ಅಥವಾ ಭಾರತದಲ್ಲಿ ಅಪರಾಧಿಯು ಸಿಕ್ಕಿರಬಹುದಾದ ಯಾವುದೇ ಸ್ಥಳದಲ್ಲಿ ಅಪರಾಧವು ನಡೆಯಿತೆಂದು ಭಾವಿಸತಕ್ಕದ್ದು.

(5) ಈ ಪ್ರಕರಣದಲ್ಲಿ ಸಮುಚಿತ ಸರ್ಕಾರವೆಂದರೆ:–

(ಎ) ನಿಷೇಧಿತ ಸ್ಥಳ ಅಥವಾ ವಿದೇಶಿ ಸರ್ಕಾರಕ್ಕೆ ಸಂಬಂಧಪಡದ ಪ್ರಕರಣ 5ರ ಅಡಿಯಲ್ಲಿನ ಯಾವುವೇ ಅಪರಾಧಗಳ ಸಂಬಂಧದಲ್ಲಿ ರಾಜ್ಯ ಸರ್ಕಾರ; ಮತ್ತು

(ಬಿ) ಇತರ ಯಾವುದೇ ಅಪರಾಧದ ಸಂಬಂಧದಲ್ಲಿ, ಕೇಂದ್ರ ಸರ್ಕಾರ.

**14. ವ್ಯವಹರಣೆಗಳಿಂದ ಸಾರ್ವಜನಿಕರನ್ನು ಹೊರಹಾಕುವುದು.–** ಯಾವುದೇ ವ್ಯವಹರಣೆಗಳಿಂದ ಸಾರ್ವಜನಿಕರನ್ನು ಹೊರಹಾಕಲು ನ್ಯಾಯಾಲಯವು ಹೊಂದಿರುವ ಯಾವುದೇ ಅಧಿಕಾರಗಳ ಜೊತೆಗೆ ಮತ್ತು ಅವುಗಳಿಗೆ ಬಾಧಕವಾಗದಂತೆ ಈ ಅಧಿನಿಯಮದ ಅಡಿಯಲ್ಲಿನ ಅಪರಾಧಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧವಾಗಿ ನ್ಯಾಯಾಲಯದ ಮುಂದೆ ವ್ಯವಹರಣೆಗಳು ನಡೆಯುತ್ತಿರುವಾಗ ಅಥವಾ ಅಪೀಲು ವ್ಯವಹರಣೆಗಳಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ವ್ಯಕ್ತಿಯ ಅಧಿವಿಚಾರಣೆಯ ಕ್ರಮದಲ್ಲಿ ವ್ಯವಹರಣೆಗಳು ನಡೆಯುವಾಗ ಕೊಡಬೇಕಾದ ಯಾವುದೇ ಸಾಕ್ಷ್ಯದ ಅಥವಾ ನೀಡಬೇಕಾದ ಯಾವುದೇ ಹೇಳಿಕೆಯ ಪ್ರಕಟಣೆಯು ರಾಷ್ಟ್ರದ ಸುರಕ್ಷತೆಗೆ ಬಾಧಕವಾಗುವುದೆಂಬ ಕಾರಣದಿಂದ ಸಾರ್ವಜನಿಕರೆಲ್ಲರನ್ನು ಅಥವಾ ಅದರಲ್ಲಿ ಯಾರೇ ಕೆಲವರನ್ನು ಸುನಾವಣೆಯ ಯಾವುದೇ ಹಂತದಲ್ಲಿ ಹೊರಹಾಕತಕ್ಕದ್ದೆಂದು ಅಭಿಯೋಜನೆ ಪಕ್ಷ ಅರ್ಜಿ ಹಾಕಿಕೊಂಡರೆ ನ್ಯಾಯಾಲಯವು ಅದರಂತೆ ಆದೇಶವನ್ನು ಮಾಡಬಹುದು. ಆದರೆ, ಯಾವುದೇ ಸಂದರ್ಭದಲ್ಲಿ ಶಿಕ್ಷೆಯ ಆದೇಶವನ್ನು ಬಹಿರಂಗವಾಗಿ ಮಾಡತಕ್ಕದ್ದು.

**15. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಹಾಗೂ ಕಂಪನಿಯು ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು:

ಪರಂತು, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ಅವನು ರುಜುವಾತುಪಡಿಸಿದರೆ ಈ ಉಪ ಪ್ರಕರಣದಲ್ಲಿ ಇರುವುದ್ಯಾವುದೂ ಆ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದಂಥ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ ಪ್ರಕರಣ (1)ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆಯಿತೆಂದು ಹೇಳಬಹುದಾದಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯು ಆ ಅಪರಾಧದ ತಪ್ಪಿತಸ್ಥನೆಂದು ಸಹಾ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ನಿಗಮಿತ ನಿಕಾಯ ಮತ್ತು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

[**16. ನಿರಸಿತ.–** 1927ನೇ (1927ರ 12) ಅಧಿನಿಯಮದ ಪ್ರಕರಣ 2 ಮತ್ತು ಅನುಸೂಚಿಯಿಂದ ನಿರಸಿತವಾಗಿದೆ.]

* * * * *